**ಕರ್ನಾಟಕ ಸರ್ಕಾರ**

ಉಪನಿರ್ದೇಶಕರು(ಆಡಳಿತ) ರವರ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ,

--------------------ಜಿಲ್ಲೆ

ಸಂಖ್ಯೆ: /ಪ್ರೌ.ಶಾ.ಶಿ.ನೇ/2012-13 ದಿನಾಂಕ: 19-06-2012

ಗೆ

**ಶ್ರೀ/ಶ್ರೀಮತಿ** ________________

-----------------------------

-----------------------------

ಮಾನ್ಯರೆ,

ವಿಷಯ:- 2012-13ನೇ ಸಾಲಿನಲ್ಲಿ ಪ್ರೌಢಶಾಲಾ ಸಹಶಿಕ್ಷಕರ ನೇಮಕಾತಿಗೆ ನಡೆಸುವ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಪರೀಕ್ಷಾ ಕೇಂದ್ರಗಳಿಗೆ **ವೀಕ್ಷಕರನ್ನು** ನೇಮಿಸುವ ಬಗ್ಗೆ.

-0-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 15-07-2012 ರಿಂದ 18-07-2012 ರವರೆಗೆ ನಡೆಯಲಿರುವ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಗೆ ಕೇಂದ್ರದ ವೀಕ್ಷಕರಾಗಿ ಕಾರ್ಯ ನಿರ್ವಹಿಸಲು ತಮ್ಮನ್ನು (ಕೇಂದ್ರದ ಹೆಸರು)........................................................................................................ ನೇಮಿಸಿದೆ. ಈ ಸಂಬಂಧ ಪೂರ್ಣ ವಿವರಗಳನ್ನೊಳಗೊಂಡಿರುವ ಮಾರ್ಗಸೂಚಿ ಹಾಗೂ ಕೇಂದ್ರದ ವೀಕ್ಷಕರಾಗಿ ಕಾರ್ಯನಿರ್ವಹಿಸುವ ಬಗ್ಗೆ ಮುಖ್ಯ ಕಾರ್ಯಸೂಚಿಯನ್ನು ಈ ಪತ್ರದ ಜೊತೆ ಲಗತ್ತಿಸಿದೆ. ಜಿಲ್ಲಾ ಉಪನಿರ್ದೇಶಕರು ಅಧಿಕಾರಿಗಳು ನೇಮಿಸಿದ ಮಾರ್ಗಾಧಿಕಾರಿಗಳಿಂದ ಪರೀಕ್ಷೆಯ ಗೌಪ್ಯ ಸಾಮಗ್ರಿಗಳನ್ನು ಪಡೆದು ಪರೀಕ್ಷಾ ನಂತರ ಉತ್ತರಿಸಿದ ಓ.ಎಂ.ಆರ್. ಮತ್ತು ಇತರ ಗೌಪ್ಯ ಸಾಮಗ್ರಿಗಳನ್ನು **Insured Register Parcel** ಮೂಲಕ ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು ಇಲ್ಲಿಗೆ ಕಳುಹಿಸಲು ಹಾಗೂ ಉಳಿದ ಪ್ರಶ್ನೆ ಪತ್ರಿಕೆಗಳ ಮತ್ತು ಇತರೆ ಸಾಮಗ್ರಿಗಳನ್ನು ಜಿಲ್ಲಾ ಉಪನಿರ್ದೇಶಕರು ನೇಮಿಸಿರುವ ಮಾರ್ಗಾಧಿಕಾರಿಗಳಿಗೆ ಒಪ್ಪಿಸುವ ತನಕ ಪರೀಕ್ಷಾ ಕಾರ್ಯಗಳನ್ನು ಕೇಂದ್ರದ ಅಧೀಕ್ಷಕರ ಜೊತೆ ಇದ್ದು ಪರೀಕ್ಷಾ ಕಾರ್ಯದ ಜವಾಬ್ದಾರಿಯನ್ನು ವಹಿಸಿಕೊಂಡು ಯಾವುದೇ ಅಡೆತಡೆ ಇಲ್ಲದೆ ಯಶಸ್ವಿಯಾಗಿ ಪರೀಕ್ಷೆಯನ್ನು ನಡೆಸಲು ಕೋರಿದೆ. ಪರೀಕ್ಷಾ ದಿನಾಂಕ, ಅವಧಿ ಮತ್ತು ವಿಷಯವನ್ನು ಕಡ್ಡಾಯವಾಗಿ ಪರಿಶೀಲಿಸಿದ ನಂತರವೇ ಪ್ರಶ್ನೆ ಪತ್ರಿಕೆ ಬಂಡಲ್‌ಗಳನ್ನು ತೆರೆಯಲು ಕ್ರಮ ವಹಿಸುವುದು. ಪರೀಕ್ಷೆ ಪ್ರಾರಂಭವಾದ 15 ನಿಮಿಷಗಳ ತರುವಾಯ ಕೊಠಡಿಗಳಿಂದ ತಂದ ಹಾಗೂ ಕೇಂದ್ರದಲ್ಲಿ ಉಳಿಕೆಯಾದ ಪ್ರಶ್ನೆ ಪತ್ರಿಕೆಗಳನ್ನು ಅಲ್ಮೇರಾದಲ್ಲಿ ಮುಖ್ಯ ಅಧೀಕ್ಷಕರೊಂದಿಗೆ ಜಂಟಿಯಾಗಿ ಮೊಹರು ಮಾಡಿ ಲೆಕ್ಕ ಪತ್ರ ಇಡುವುದು. ಈ ಆದೇಶದ ಜೊತೆಗೆ ಅಭ್ಯರ್ಥಿಗಳ ನಾಮಿನಲ್ ರೋಲ್ ಹಾಗೂ ಸಾದಿಲ್ವಾರು ವೆಚ್ಚದ ಬ್ಯಾಂಕ್ ಹುಂಡಿಯನ್ನು ಕಳುಹಿಸಿಕೊಡಲಾಗಿದ್ದು, ನೋಡಲ್ ಅಧಿಕಾರಿಗಳಿಂದ ಪಡೆದುಕೊಳ್ಳುವುದು. ನಿಗದಿತ ಸಂಭಾವನೆಯನ್ನು ಕೇಂದ್ರದ ಮುಖ್ಯ ಅಧೀಕ್ಷಕರಿಂದ ಪಡೆದು ಸ್ವೀಕೃತಿ ನೀಡಲು ತಿಳಿಸಿದೆ. ಕೇಂದ್ರದ ವೀಕ್ಷಕರು ಪರೀಕ್ಷೆಗೆ ಸಂಬಂಧಿಸಿದ ಎಲ್ಲಾ ಪೂರ್ಣ ಕಾರ್ಯಗಳನ್ನು ನಿರ್ವಹಿಸಿದ ಬಗ್ಗೆ ಪ್ರತಿ ದಿನ, ಪ್ರತಿ ಪರೀಕ್ಷಾ ಅಧಿವೇಶನಕ್ಕೆ ಸಂಬಂಧಿಸಿದ ಡೈರಿ (ದಿನಚರಿ) ಯನ್ನು ತಪ್ಪದೇ ಬರೆದು ಎಲ್ಲಾ ದಿನಗಳ ಎಲ್ಲಾ ಅಧಿವೇಶನಗಳ ದಿನಚರಿಯನ್ನು ಜಿಲ್ಲಾ ಉಪನಿರ್ದೇಶಕರು(ಆಡಳಿತ) ರವರಿಗೆ ಒಪ್ಪಿಸತಕ್ಕದ್ದು.

ಈಗ ಮಾಡಿರುವ ನೇಮಕಾತಿಯನ್ನು ಯಾವುದೇ ಕಾರಣಕ್ಕೂ ಮಾರ್ಪಡಿಸಲು / ರದ್ದುಪಡಿಸಲು ಅವಕಾಶವಿಲ್ಲ. ಆದರೆ ಪರೀಕ್ಷೆಗೆ ತಮ್ಮ ಮಗ/ಮಗಳು ನೋಂದಣಿಯಾಗಿದ್ದಲ್ಲಿ ಕೇಂದ್ರದ ವೀಕ್ಷಕರಾಗಿ ಕಾರ್ಯ ನಿರ್ವಹಿಸಲು ತಾವು ಅನರ್ಹರಾಗುವಿರಿ. ತಾವು ಈ ಕಾರಣಕ್ಕಾಗಿ ಅನರ್ಹರಾದಲ್ಲಿ ತಕ್ಷಣ ಈ ಕಛೇರಿಗೆ ಲಿಖಿತವಾಗಿ ತಿಳಿಸುವುದು.

ತಮ್ಮ ನಂಬುಗೆಯ

ಉಪನಿರ್ದೇಶಕರು (ಆಡಳಿತ)

________________ ಜಿಲ್ಲೆ